**ಆರ್.ಎ. ನಂ. 28/2023 ಪಿ.ಡಬ್ಲ್ಯೂ 1**

ದಿನಾಂಕಃ **29.08.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : ಎದುರುದಾರರ ಪರ ವಕೀಲರಿಂದಃ

01. ಓ.ಎಸ್. ನಂ. 7/2006 ರಲ್ಲಿ ನನಗೆ ಸಮನ್ಸ್ ಜಾರಿಯಾಗಿದ್ದರೂ ನಾನು ಕೋರ್ಟಿಗೆ ಹಾಜರಾಗಿರಲಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ದಿನಾಂಕ 30.09.2006 ರಂದು ನನ್ನ ಹೆಂಡತಿ ಮತ್ತು ಮಕ್ಕಳ ಪರವಾಗಿ ಡಿಕ್ರಿ ಕೂಡಾ ಆಗಿತ್ತು ಎಂದರೆ ಹೌದು, ಡಿಕ್ರಿ ಆಗಿದ್ದರಿಂದಲೇ ನಾನು ಅಪೀಲು ಸಲ್ಲಿಸಿದ್ದೇನೆ. ನನ್ನ ಹೆಂಡತಿ ಮಕ್ಕಳು ಡಿಕ್ರಿ ಆಧಾರದ ಮೇಲೆ ಸಲ್ಲಿಸಿದ್ದ ಎಫ್.ಡಿ.ಪಿ. ನಂ. 2/2009 ರಲ್ಲಿ ಕೂಡಾ ನನಗೆ ಸಮನ್ಸ್ ಜಾರಿಯಾದರೂ ನಾನು ಕೋರ್ಟಿಗೆ ಹಾಜರಾಗಿರಲಿಲ್ಲ ಎಂದರೆ ನನಗೆ ಸಮನ್ಸ್ ಯಾವುದೂ ಬಂದಿಲ್ಲ. ನನಗೆ ಸಮನ್ಸ್ ಜಾರಿಯಾಗಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 01.10.2011 ರಂದು ಅಂತಿಮ ಡಿಕ್ರಿ ಕೂಡಾ ಆದೇಶ ಮಾಡಿದ್ದರು ಎಂದರೆ ಸರಿಯಲ್ಲ. ಎಫ್.ಡಿ.ಪಿ. ಯಲ್ಲಿ ಕೋರ್ಟ್ ಕಮಿಶನರ್ ನೇಮಕ ಆದಾಗ ಅವರು ಜಮೀನಿನ ಸರ್ವೇ ಮಾಡಲು ಬರುವ ಮುಂಚೆ ನೋಟೀಸ್ ಜಾರಿ ಮಾಡಿದರೂ ನಾನು ಹಾಜರಾಗಿರಲಿಲ್ಲ ಎಂದರೆ ಸರಿಯಲ್ಲ. (ಮನೆ ಅಳತೆ ಮಾಡುವ ಮುಂಚೆ ಪಿ.ಡಬ್ಲ್ಯೂ.ಡಿ. ಇಂಜಿನಿಯರ್ ನೋಟೀಸ್ ನೀಡಿದರೂ ನಾನು ಹಾಜರಾಗಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಪಾಟೀಸವಾಲು ಮಾಡುತ್ತಿರುವ ವಕೀಲರಿಗೆ ನನಗೆ ಒಂದು ನೋಟೀಸ್ ಜಾರಿಯಾಗಿದ್ದನ್ನು ನೀವು ತೋರಿಸಿ ಎಂದು ಪ್ರಶ್ನೆ ಮಾಡಿದ್ದು, ಸಾಕ್ಷಿಗೆ ಪಾಟೀಸವಾಲು ಮಾಡುವ ವಕೀಲರಿಗೆ ಪ್ರಶ್ನೆ ಮಾಡಕೂಡದು ಎಂದು ಎಚ್ಚರಿಲಾಗಿದೆ).

***(ಸಾಕ್ಷಿಯು ಪಾಟೀಸವಾಲಿನ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರ ನೀಡದೇ ಮರುಪ್ರಶ್ನೆ ಮಾಡುತ್ತಿರುವ ಕಾರಣ ಪಾಟೀಸವಾಲನ್ನು ಮುಂದೂಡಲಾಗಿದೆ).***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
**ಹೂವಿನ ಹಡಗಲಿ.**